# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೪೦ (262)
2. ಸದಸ್ಯರ ಹೆಸರು : ಶ್ರೀ ಕೆ ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 04.03.2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಳ್ತಂಗಡಿ ತಾಲ್ಲೂಕು ವೇಣೂರು ಗ್ರಾಮ ಪಂಚಾಯತ್ ಎ.ಪಿ.ಎಂ.ಸಿ ಸಂತೆ ಮಾರುಕಟ್ಟೆ ಅಂಗಡಿ ಕೋಣೆಗಳನ್ನು ಹರಾಜು ಮಾಡಿ ಹಂಚಿಕೆ ಮಾಡಿರುವ ಕುರಿತಂತೆ ಅನುಸರಿಸುತ್ತಿರುವ ಕಾನೂನು ರೀತಿಯ ಮಾನದಂಡಗಳೇನು; ಹಂಚಿಕೆ ಮಾಡುವಾಗ ಕಾನೂನು ನಿಯಮಗಳನ್ನು ಅನುಸರಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ನಬಾರ್ಡ್ ಸಂಸ್ಥೆಯ ವೇರ್‌ಹೌಸ್ ಇನ್ಫ್ರಾಸ್ಟ್ರಕ್ಚರ್ ಫಂಡ್-20ರ ಯೋಜನೆಯಡಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬೆಳ್ತಂಗಡಿ ವ್ಯಾಪ್ತಿಯ ವೇಣೂರು ಗ್ರಾಮ ಪಂಚಾಯಿತಿ ಸಂತೆ ಜಾಗದಲ್ಲಿ ರೂ. 49.52 ಲಕ್ಷಗಳ ವೆಚ್ಚದಲ್ಲಿ ಮುಚ್ಚು ಹರಾಜುಕಟ್ಟೆಯನ್ನು ನಿರ್ಮಾಣ ಮಾಡಿ ದಿನಾಂಕ 06.06.2017 ರಂದು ವೇಣೂರು ಗ್ರಾಮ ಪಂಚಾಯಿತಿ ವಶಕ್ಕೆ ಹಸ್ತಾಂತರಿಸಲಾಗಿರುತ್ತದೆ.<br><br>ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸುವ ಸಮಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವೇಣೂರು ಗ್ರಾಮ ಪಂಚಾಯಿತಿ ರವರೊಂದಿಗೆ ಮಾಡಿಕೊಳ್ಳಲಾಗಿ, ಕರಾರಿನ ಕಂಡಿಕೆ (5) ರಲ್ಲಿ ಯಾವುದೇ ಸಂಘ/ಸಂಸ್ಥೆ/ವ್ಯಕ್ತಿಗಳಿಗೆ ಕಟ್ಟಡವನ್ನು ಮಾರಾಟ/ಲೀವ್ ಮತ್ತು ಲೈಸೆನ್ಸ್/ಲೀಸ್-ಕಂ-ಸೇಲ್ ಯಾವುದೇ ಇತರ ವಿಧಾನದಲ್ಲಿ ವಿಲೇವಾರಿ ಮಾಡತಕ್ಕದಲ್ಲ. ಈ ರೀತಿ ಮಾಡಿರುವುದು ಸಮಿತಿಯ ಗಮನಕ್ಕೆ ಬಂದರೆ ಕಟ್ಟಡದ ಸಮೇತವಾಗಿ ಸಂತೆ ಮೈದಾನವನ್ನು ಸಮಿತಿಯ ವಶಕ್ಕೆ ತೆಗೆದುಕೊಳ್ಳಲಾಗುವುದು ಎಂದು ನಿಬಂಧನೆ ಇರುತ್ತದೆ. |
| ಆ | ಸದರಿ ಹಂಚಿಕೆ ಕುರಿತಂತೆ ಸಾರ್ವಜನಿಕರಿಂದ ಆಕ್ಷೇಪಣೆ ವ್ಯಕ್ತವಾಗಿದೆಯೇ; ಹಾಗಿದ್ದಲ್ಲಿ, ಈ ಕುರಿತಂತೆ ಕೈಗೊಂಡ ಕ್ರಮಗಳೇನು; ವಿಸ್ತೃತ ಮಾಹಿತಿ ಒದಗಿಸುವುದು? | ಬೆಳ್ತಂಗಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ವೇಣೂರು ಗ್ರಾಮೀಣ ಸಂತೆ ಮೈದಾನದಲ್ಲಿ ನಿರ್ಮಿಸಿರುವ ಮುಚ್ಚಿದ ಹರಾಜುಕಟ್ಟೆ ಕಟ್ಟಡವನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿದ್ದು, ಸದರಿ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ, ಅದೇ ಉದ್ದೇಶಕ್ಕೆ ಬಳಸದೆ ವಾಣಿಜ್ಯ ಕಟ್ಟಡಗಳನ್ನಾಗಿ ಪರಿವರ್ತಿಸಿ ಕೃಷಿಕರು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಇಲ್ಲವಾಗಿದ್ದು, ತಮಗೆ ನ್ಯಾಯ ಒದಗಿಸುವಂತೆ ಹಾಗೂ ಸದರಿ ಕಟ್ಟಡವನ್ನು ಸಮಿತಿ ವಶಕ್ಕೆ ಪಡೆಯುವಂತೆ ಕೃಷಿಕರಿಂದ ಬೆಳ್ತಂಗಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ದೂರುಗಳು ಬಂದಿರುತ್ತವೆ.<br><br>ಈ ದೂರುಗಳಿಗೆ ಸಂಬಂಧಿಸಿದಂತೆ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳ್ತಂಗಡಿ ಇವರ ಸಂಖ್ಯೆ: ಕೃಉಮಾಸ(ಬೆ)/1096/2019-20ರ ದಿನಾಂಕ:16.10.2019ರ ಪತ್ರದಲ್ಲಿ ಅಧ್ಯಕ್ಷರು / ಪಂಚಾಯತ್ ಅಭಿವೃದ್ಧಿ ಅಧಿಕಾರಿ, ವೇಣೂರು ಗ್ರಾಮ ಪಂಚಾಯಿತಿ ರವರಿಗೆ ಕರಾರು ಉಲ್ಲಂಘಿಸಿರುವ ಬಗ್ಗೆ ತೆಗೆದುಕೊಂಡಿರುವ ಕ್ರಮವನ್ನು ಸೂಕ್ತ ದಾಖಲೆಗಳೊಂದಿಗೆ ಮಾಹಿತಿ ಒದಗಿಸಲು ಕೋರಲಾಗಿದೆ. |

.....2

| | | |
|---|---|---|
| | | ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ವೇಣೂರು ಇವರು ಪತ್ರ ಸಂಖ್ಯೆ: ಗ್ರಾ.ಪಂ.ವೇಣೂರು 674/ 2019-20, ದಿನಾಂಕ 29.02.2020 ರಲ್ಲಿ ಕೃಷಿ ಮಾರುಕಟ್ಟೆ ಉತ್ಪನ್ನ ಸಮಿತಿ ಬೆಳ್ತಂಗಡಿ ಇವರಿಂದ ವೇಣೂರು ಗ್ರಾಮ ಪಂಚಾಯಿತಿಗೆ ಕಟ್ಟಡ ಹಸ್ತಾಂತರ ನಂತರದಲ್ಲಿ ದಿನಾಂಕ 15.09.2017ರ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ನಿರ್ಣಯದಂತೆ ಸದರಿ ಕಟ್ಟಡದ ರಸ್ತೆಯ ಭಾಗಕ್ಕೆ 06 ಅಂಗಡಿ ಕೋಣೆಗಳಿಗೆ ಗ್ರಾಮ ಪಂಚಾಯಿತಿ ಅನುದಾನ ನಿಗದಿಪಡಿಸಿ, ಕ್ರಿಯಾ ಯೋಜನೆಯಂತೆ ಅಂಗಡಿ ಕೋಣೆಗಳನ್ನು ನಿರ್ಮಿಸಿ ಹರಾಜು ಮಾಡಲಾಗಿದೆ. ಸದರಿ 6 ಅಂಗಡಿ ಕೋಣೆಗಳಿಂದ ಮಾಸಿಕ ರೂ. 20,000.00 ರಷ್ಟು ಆದಾಯ ಗ್ರಾಮ ಪಂಚಾಯಿತಿಗೆ ಬರುತ್ತಿದ್ದು, ಅದನ್ನು ಗ್ರಾಮಗಳಿಗೆ ಮತ್ತು ಸದರಿ ಕಟ್ಟಡದ ನಿರ್ವಹಣೆಗೆ ವಿನಿಯೋಗಿಸಲಾಗುತ್ತಿದೆ. ಸದರಿ ಕಟ್ಟಡದಲ್ಲಿ 6 ಅಂಗಡಿ ಕೋಣೆಗಳು ಮಾತ್ರ ರಚಿಸಿದ್ದು ಕಟ್ಟಡದ ಶೇ 60 ಭಾಗವನ್ನು ರೈತರು ಬೆಳೆದ ಉತ್ಪನ್ನಗಳನ್ನು ತಂದು ಸದರಿ ಕಟ್ಟಡದಲ್ಲಿ ಉಚಿತವಾಗಿ ಇಟ್ಟು ಮಾರಾಟ ಮಾಡಲು ಅವಕಾಶವಿದೆ. ಪ್ರತಿ ತಿಂಗಳ ಸಭೆಯಲ್ಲಿ ಉಚಿತವಾಗಿ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಇರುವ ಅವಕಾಶದ ಬಗ್ಗೆ ರೈತರಿಗೆ ತಿಳಿಸಿದ್ದು, ಈವರೆಗೆ ರೈತರು ಸ್ಪಂದನೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.<br><br>ಬೆಳ್ತಂಗಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯೊಂದಿಗೆ ಹಸ್ತಾಂತರ ಸಂದರ್ಭದಲ್ಲಿ ಮಾಡಿಕೊಂಡ ಕರಾರು ಉಲ್ಲಂಘನೆಯಾಗಿರುವುದು ಕಂಡು ಬಂದಿದ್ದು, ಕರಾರಿನ ನಿಭಂದನೆಗಳಂತೆ ಬೆಳ್ತಂಗಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಸೂಕ್ತ ಕ್ರಮವನ್ನು ಜರುಗಿಸುತ್ತದೆ. |

**ಸಂಖ್ಯೆ: ಸಇ 118 ಎಂಆರ್ಇ 2020**

(ಎಸ್.ಟಿ. ಸೋಮಶೇಖರ್)
**ಸಹಕಾರ ಸಚಿವರು.**